## ನಿಮ್ಮೊಡನೆ

# ಲಸಿಕೆಯ ನಿರೀಕ್ಷೆಯಲ್ಲಿ ನಿರ್ಲಕ್ಷ್ಯ ಸಲ್ಲದು ಮುನ್ನೆಚ್ಚರಿಕೆಗೂ ಮಿಗಿಲಾದ ಮದ್ದು ಬೇರಿಲ್ಲ

**ಪ್ರತಿಯೊಬ್ಬರಿಗೂ ಲಸಿಕೆ ದೊರೆಯುತ್ತದೆಯೇ? ದೊರೆತರೆ ಯಾವಾಗ? ಎನ್ನುವುದು ತಿಳಿಯದು. ಹಾಗಾಗಿ, ಸಾರ್ವಜನಿಕರು ಮೈಮರೆಯುವಂತಿಲ್ಲ. ದೂರದಬೆಟ್ಟದಂತಿರುವ ಲಸಿಕೆಗಿಂತಲೂ ಅಂಗೈಬೆಣ್ಣೆಯಂತಹ ಸುರಕ್ಷಿತ ಕ್ರಮಗಳೇ ನಮ್ಮ ಜೀವವನ್ನು ಕಾಯಬಲ್ಲವು. ಕೊರೊನಾದಂತಹ ವೈರಸ್ ವಿರುದ್ಧದ ಹೋರಾಟದಲ್ಲಿ ಮುನ್ನೆಚ್ಚರಿಕೆಗಿಂತಲೂ ಮಿಗಿಲಾದ ಮದ್ದು ಮತ್ತೊಂದಿಲ್ಲ.**




ಪ್ರತಿ ಸಂಕಟದ ಅಂಚಿನಲ್ಲಿ ಭರವಸೆಯ ಬೆಳ್ಳಿಗೆರೆ ಇರುವುದು ಪ್ರಕೃತಿಯ ನಿಯಮ. ಸರ್ವನಾಶದ ರೂಪದಲ್ಲಿ ಪ್ರಭಾವಿಸುವ ಪ್ರಳಯದ ಗರ್ಭದಲ್ಲಿ ಕೂಡ ಹೊಸ ಜೀವಬೀಜದ ಚಿಗುರಿಗೆ ಅವಕಾಶವಿರುತ್ತದೆ. ಇಂಥ ಆಶಾಭಾವವೇ ಪ್ರಸಕ್ತ ಕೊರೊನಾ ಬಿಕ್ಕಟ್ಟಿನಿಂದ ಹೊರಬರಲು ನಮಗೆ ಪ್ರೇರಣೆಯಾಗಬೇಕಾಗಿದೆ. 2020ರ ಇಡೀ ವರ್ಷ ಕೊರೊನಾದ ಆತಂಕ ವಿಶ್ವವನ್ನು ಆವರಿಸಿಕೊಂಡಿತ್ತು. ಆ ಸಂಕಟ ಸದ್ಯಕ್ಕೆ ದೂರವಾಗುವ ಲಕ್ಷಣಗಳೇನೂ ಇಲ್ಲ. 2021ರಲ್ಲೂ 'ಕೋವಿಡ್–19' ಜಾಡ್ಯ ದೂರವಾಗುವ ನಿರೀಕ್ಷೆಗಳಿಲ್ಲ. ಹಾಗೆಂದು, ಕೊರೊನಾ ಸೋಂಕಿನ ಭಯದಲ್ಲಿ ಮನೆಯಲ್ಲಿಯೇ ಉಳಿಯುವುದು ಇನ್ನುಮುಂದೆ ಸಾಧ್ಯವಿಲ್ಲ. ವೈರಸ್ ಅನ್ನು ನಿರ್ಲಕ್ಷಿಸಿ ಜೀವನೋಪಾಯಕ್ಕಾಗಿ ಮನೆಗಳಿಂದ ಹೊರಬೀಳಲೇಬೇಕು. ನಿರ್ಲಕ್ಷ್ಯವೆಂದರೆ ಬಿಡುಬೀಸಾದ ಜೀವನಶೈಲಿ ಎಂದರ್ಥವಲ್ಲ; ಸರ್ಕಾರದ ಮಾರ್ಗಸೂಚಿಗಳನ್ನು ಚಾಚೂತಪ್ಪದೆ ಅನುಸರಿಸುತ್ತಲೇ, ನಮ್ಮ ನಮ್ಮ ಕೆಲಸಗಳಲ್ಲಿ ತೊಡಗಿಕೊಳ್ಳುವುದು. ಭೌತಿಕ ಅಂತರ, ಮಾಸ್ಕ್, ಸ್ಯಾನಿಟೈಸರ್, ವೈಯಕ್ತಿಕ ಶುಚಿತ್ವ – ಇವೆಲ್ಲ 2021ರಲ್ಲೂ ನಮ್ಮ ವೈಯಕ್ತಿಕ ಜೀವನದ ಭಾಗವಾಗುವುದು ಅನಿವಾರ್ಯ.

ಮನುಕುಲದ ಇತಿಹಾಸದಲ್ಲಿ 2020 ಅತ್ಯಂತ ಸಂಕಷ್ಟದ ವರ್ಷಗಳಲ್ಲೊಂದು. ವೈಯಕ್ತಿಕ ಅಸಹಾಯಕತೆ ಸಮಾಜಕ್ಕೆ ಹೊಸತಲ್ಲ. ಆದರೆ, ಸಮೂಹವೇ ಕೈಚೆಲ್ಲಿ ಕೂರುವ ಅಸಹನೀಯ ಸಂದರ್ಭವನ್ನು 2020 ನಮಗೆ ಕಾಣಿಸಿತು. ಬಡತನ, ಹಸಿವೆ, ಯುದ್ಧಗಳು ಇತಿಹಾಸದುದ್ದಕ್ಕೂ ಮನುಷ್ಯನನ್ನು ಕಂಗೆಡಿಸುತ್ತಲೇ ಬಂದಿವೆ. ಆದರೆ, ಕಳೆದ ವರ್ಷದಲ್ಲಿ ನಾವು ಸಂಘರ್ಷ ನಡೆಸಿದ್ದು ಅಗೋಚರ ಎದುರಾಳಿಯೊಂದಿಗೆ. ನಮ್ಮ ಕೈಯನ್ನು ನಾವೇ ನಂಬದ ಸ್ಥಿತಿ, ನಮ್ಮ ಮನೆಯವರ ಮುಖಕ್ಕೆ ಮುಖ ಕೊಟ್ಟು ಮಾತನಾಡಲಾಗದ ಸಂದರ್ಭವನ್ನು ಊಹಿಸಿಕೊಳ್ಳುವುದೇ ಕಷ್ಟ. ಅಂತರಂಗದ ಚೆಲುವು ಹಾಗೂ ಕ್ರೌರ್ಯ ಎರಡರ ಅನಾವರಣಕ್ಕೂ ಕೊರೊನಾ ವೇದಿಕೆಯಾಯಿತು. ಇಡೀ ವರ್ಷ ಬಡವ–ಬಲ್ಲಿದ ಭೇದವಿಲ್ಲದೆ ಎಲ್ಲರೂ ಕೊರೊನಾದೆದುರು ತಲೆತಗ್ಗಿಸಿ ಜೀವಿಸುವಂತಾಯಿತು. ಆಧುನಿಕ ಜಗತ್ತಿನ ಪ್ರಮುಖ ಲಕ್ಷಣವಾದ ಚಲನಶೀಲತೆ ಕಾಲು ಮುರಿದುಕೊಂಡ ಸ್ಥಿತಿಯಲ್ಲಿತ್ತು. ಈಗ ಮತ್ತೆ ಕೈಕಾಲು ಕೊಡವಿ ಹೊರಗೆ ನಡೆಯುವ ಸ್ಥಿತಿ ನಮ್ಮದು.

ಹೊರಗೆ ನಡೆಯುವುದು ಎಂದರೆ ಹೊಸ ಬದುಕನ್ನು ಕಟ್ಟಿಕೊಳ್ಳುವುದು ಎಂದರ್ಥ. ಮಕ್ಕಳ ಜಗತ್ತನ್ನೇ ನೋಡಿ. ಶಾಲೆ–ಮನೆಗಳ ನಡುವೆ ಹಾರಾಡುವ ಹಕ್ಕಿಗಳಂತಿದ್ದ ಚಿಣ್ಣರು, ಶಾಲೆಯನ್ನೇ ಮರೆಯುವ ಸ್ಥಿತಿ 2020ರಲ್ಲಿ ಎದುರಾಯಿತು. ಒಮ್ಮೆಗೇ ಮಡಿಲಿಗೆ ಬಿದ್ದ ಮಕ್ಕಳನ್ನು ಸಂಭಾಳಿಸುವುದು ಪೋಷಕರಿಗೂ ಕಷ್ಟವಾಯಿತು. ಮೊಬೈಲ್ ಬೆಳಕಿನಲ್ಲಿ ಪೇಲವ ಮುಖಗಳನ್ನು ಹೊತ್ತು ಕೂತ ಮಕ್ಕಳ ಕನಸುಗಳಲ್ಲೀಗ ಮತ್ತೆ ಶಾಲೆಯ ಚಿತ್ರಗಳು. ಶೈಕ್ಷಣಿಕ ಜಗತ್ತು ಮರಳಿ ಹಳಿ ಸೇರಿದರೆ, ಅರ್ಧ ಜಗತ್ತೇ ದಡ ಸೇರಿದಂತೆ. ಮಕ್ಕಳಂತೆಯೇ ಕಾರ್ಮಿಕರ ಮುಖಗಳೂ ಕಳಾಹೀನವಾಗಿವೆ. ಆರ್ಥಿಕ ಹಿಂಜರಿತದಿಂದ ಜಗತ್ತು ತಲ್ಲಣಗೊಂಡಿರುವ ಸಂದರ್ಭದಲ್ಲಿ, ದುಡಿಯುವ ಕೈಗಳು ಕಂಪಿಸುವುದು ಸಹಜವೇ. ಒಂದೆಡೆ, ಉದ್ಯೋಗದ ಅಭದ್ರತೆ, ಇನ್ನೊಂದೆಡೆ ವೈರಾಣುವಿನ ಭೀತಿ – ಈ ಕಣ್ಣಾಮುಚ್ಚಾಲೆಯಲ್ಲಿ ಹೈರಾಣಾಗಿದ್ದ ಜನಸಾಮಾನ್ಯರ ಪಾಲಿಗೆ 2021 ಅಕ್ಷರಶಃ ಬದುಕನ್ನು ಮರಳಿ ಕಟ್ಟಿಕೊಳ್ಳುವ ವರ್ಷವಾಗಿದೆ. ದೊಡ್ಡ ಸಂಖ್ಯೆಯ ಜನರು ನೆಮ್ಮದಿ ಹುಡುಕಿಕೊಂಡು ನಗರಗಳಿಂದ ತಮ್ಮೂರುಗಳಿಗೆ ಮರಳಿದ್ದಾರೆ. ಸೋಂಕಿನಭೀತಿ ಕಡಿಮೆಯಾದ ಸಂದರ್ಭದಲ್ಲಿ ಅವರಲ್ಲಿ ಬಹುತೇಕರು ಮತ್ತೆ ನಗರಗಳತ್ತ ಮುಖ ಮಾಡುವುದು ಸಹಜ. ಹೊಸ ನಡಿಗೆ, ಹೊಸ ಬದುಕಿನ ಸಂಭ್ರಮದ ರೂಪದಲ್ಲಿ 2021 ಪರಿಣಮಿಸುತ್ತದೆನ್ನುವ ನಿರೀಕ್ಷೆ ಅವರದಾಗಬೇಕಿದೆ.

ಕೊರೊನಾ ಆತಂಕಕ್ಕೆ ಉತ್ತರದ ರೂಪದಲ್ಲಿ ಲಸಿಕೆಯ ಭರವಸೆ ಕಾಣಿಸಿಕೊಂಡಿದೆ. ಆದರೆ, ಪ್ರತಿಯೊಬ್ಬ ನಾಗರಿಕನಿಗೆ ಲಸಿಕೆ ದೊರೆಯುವುದೇ? ದೊರೆತರೆ ಯಾವಾಗ? ಎನ್ನುವುದರ ಬಗ್ಗೆ ಖಚಿತವಾಗಿ ಹೇಳುವುದು ಯಾರಿಗೂ ಸಾಧ್ಯವಾಗುತ್ತಿಲ್ಲ. ಕೋಟಿ ಕೋಟಿ ಜನರಿಗೆ ಲಸಿಕೆ ದೊರಕಿಸಿಕೊಡುವುದು ಭಾರತದಂತಹ ದೇಶಗಳಲ್ಲಿ ಸುಲಭವೂ ಅಲ್ಲ. ಹಾಗಾಗಿ, ಲಸಿಕೆಯ ನಿರೀಕ್ಷೆಯಲ್ಲಿ ಸಾರ್ವಜನಿಕರು ಮೈಮರೆಯುವಂತಿಲ್ಲ. ದೂರದಬೆಟ್ಟದಂತಿರುವ ಲಸಿಕೆಗಿಂತಲೂ ಅಂಗೈಬೆಣ್ಣೆಯಂತಹ ಸುರಕ್ಷಿತ ಕ್ರಮಗಳೇ ನಮ್ಮ ಜೀವವನ್ನು ಕಾಯಬಲ್ಲವು. ಕೊರೊನಾದಂತಹ ವೈರಸ್ ವಿರುದ್ಧದ ಹೋರಾಟದಲ್ಲಿ ಮುನ್ನೆಚ್ಚರಿಕೆಗಿಂತಲೂ ಮಿಗಿಲಾದ ಮದ್ದು ಮತ್ತೊಂದಿಲ್ಲ.

ನಮ್ಮೊಳಗಿನ ಅಪರಿಚಿತತೆಯನ್ನು ನಮಗೇ ಕಾಣಿಸಿದ 'ಕೊರೊನಾ ವರ್ಷ'ದಿಂದ ಕಲಿಯುವುದೂ ಇದೆ. ಜೀವನಶೈಲಿ, ವೈಯಕ್ತಿಕ ನಂಬಿಕೆಗಳು, ಸಾಮಾಜಿಕ ಜೀವನ, ಇದೆಲ್ಲದರ ಪುನರವಲೋಕನಕ್ಕೆ 2020 ವೇದಿಕೆಯಾಗಿತ್ತು. ಬಿಡುವಿನಲ್ಲಿ ದೊರೆತ ಪಾಠವನ್ನು ಹೊಸ ವರ್ಷದಲ್ಲಿ ನಾವು ಬಳಸಿಕೊಳ್ಳಬೇಕಾಗಿದೆ. ನಮ್ಮ ಬದುಕಿನೊಂದಿಗೆ ಸಮಾಜವೂ ಹಸನಾಗಬೇಕು, ಸುತ್ತಮುತ್ತಲಿನ ಪರಿಸರವೂ ಅನಾರೋಗ್ಯದಿಂದ ಮುಕ್ತವಾಗಬೇಕು ಎನ್ನುವ ಮನೋಭಾವ ನಮಗೆ ಸಾಧ್ಯವಾದರೆ, ಅದು ಕೊರೊನಾದಿಂದ ನಮಗೆ ದೊರೆತ ಬಹುದೊಡ್ಡ ಕೊಡುಗೆಯಾದೀತು.

■ ರಘುನಾಥ ಚ.ಹ.